ಅ) ಮೈಸೂರು ನಗರಕ್ಕೆ ಕಬಿನಿ ನದಿಯಿಂದ ನೀರು ಸರಬರಾಜು ಮಾಡಲು ಯೋಜನೆಯ ಅಂದಾಜು ವೆಚ್ಚ ಎಷ್ಟು?

ಆ) ಈ ಯೋಜನೆ ಜಾರಿಗೊಂಡಲ್ಲಿ ನಗರದ ಯಾವ ಯಾವ ಬಡಾವಣೆಗಳಿಗೆ ಎಷ್ಟು ಪ್ರಮಾಣದ ನೀರು ಸರಬರಾಜು ಮಾಡಬಹುದಾಗಿದೆ.

ಇ) ಈ ಯೋಜನೆಯನ್ನು ಜಾರಿಗೊಳಿಸುವ ವಿಚಾರದಲ್ಲಿ ಸರ್ಕಾರದನ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಮೈಸೂರು ನಗರಕ್ಕೆ ಕಬಿನಿ ನದಿಯಿಂದ ಸರಬರಾಜು ಮಾಡುವ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದ್ದರಿಂದ ಯೋಜನೆಯ ವೆಚ್ಚದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಯಲಹಂಕ ನಗರ ಸಭೆ ವ್ಯಾಪ್ತಿಗೆ ಬರುವ ರಸ್ತೆಗಳ ಅಭಿವೃದ್ಧಿ

2130 (2583) - ಶ್ರೀ ಶಿವಶಂಕರ್ ರೆಡ್ಡಿ ಎನ್. ಹೆಚ್. (ಗೌರಿಬಿದನೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ನಗರಸಭೆ ವ್ಯಾಪ್ತಿಗೆ ಬರುವ ಉಪನಗರದ ಡೈರಿ ಕ್ರಾಸ್‌ನಲ್ಲಿ ವಾಹನ ದಟ್ಟಣೆ ಹಾಗೂ ಜನ ಸಂಚಾರ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಂಚಾರ ಸುಗಮಗೊಳ್ಳಲು ಪಾದಚಾರಿ ರಸ್ತೆಯ ಮೇಲಿರುವ ವಿದ್ಯುತ್ ದ್ವೀಪಗಳ ಕಂಬ ಪಟ್ಟಿ ಅಂಗಡಿಗಳನ್ನು ಸ್ಥಳಾಂತರಿಸಿ, ರಸ್ತೆಯನ್ನು ಅಗಲಗೊಳಿಸಿ ಅಭಿವೃದ್ಧಿಗೊಳಿಸಲು ಡೈರಿ ಕ್ರಾಸ್‌ನಿಂದ , 4 ಮತ್ತು 5 ನೇ ಹಂತದ ಬಡಾವಣೆಗಳ ಪಾದಚಾರಿ ರಸ್ತೆಗಳು ಹಾಗೂ ಎಲ್ಲಾ ತಿರುವುಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಸಂಚಾರ ಸುಗಮಗೊಳಿಸಲು ಪಾದಚಾರಿ ರಸ್ತೆಯಲ್ಲಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಕೆ.ಪಿ.ಟಿ.ಸಿ.ಎಲ್. ರವರಿಗೆ ಪತ್ರ ವ್ಯವಹಾರ ಮಾಡಲಾಗುವುದು. ಪೆಟ್ಟಿಗೆ ಅಂಗಡಿಗಳನ್ನು ಸ್ಥಳಾಂತರಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲು ಬಿ.ಎಂ.ಟಿ.ಎಫ್. ರವರಿಗೆ ಪತ್ರ ಬರೆಯಲಾಗಿದೆ. ಹಾಗೂ ತಿರುವು ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಸದ್ಯಕ್ಕೆ ನಗರಸಭೆಗೆ ಹಣಕಾಸಿನ ತೊಂದರೆ ಇರುವುದರಿಂದ, ಹಣಕಾಸಿನ ಸೌಲಭ್ಯತೆ ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ವರದಿಯ ಅನುಷ್ಠಾನ

2131 (2521) - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಮಧ್ಯಂತರ ಮತ್ತು ಅಂತಿಮ ವರದಿಯನ್ನು ಸರ್ಕಾರಕ್ಕೆ ನೀಡಿ ಎಷ್ಟು ದಿನಗಳಾದವು?

ಆ) ವರದಿಯ ಆಧಾರದ ಮೇಲೆ ಸರ್ಕಾರ ಯಾವ ಯಾವ ವಿಷಯದಲ್ಲಿ, ಈಗಾಗಲೇ ಕ್ರಮ ತೆಗೆದುಕೊಂಡು ಅನುಷ್ಠಾನಕ್ಕೆ ತರಲಾಗಿದೆ.

ಇ) ಇನ್ನು ಅನುಷ್ಠಾನಕ್ಕೆ ತರಬೇಕಾದ ಮುಖ್ಯವಾದ ಶಿಫಾರಸ್ಸುಗಳು ಯಾವುದು? ವಿವರಗಳನ್ನು ನೀಡುವುದು.

ಈ) ಈ ಶಿಫಾರಸ್ಸುಗಳು ಈಗ ಯಾವ ಹಂತದಲ್ಲಿದೆ; ವಿವರಗಳನ್ನು ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯನ್ನು ದಿನಾಂಕ:20-1-3-2001 ರಂದು ಮತ್ತು ಅಂತಿಮ ವರದಿಯನ್ನು ದಿನಾಂಕ: 27.12.2001 ರಂದು ನೀಡಿದೆ.

ಆ) ಆಡಳಿತ ಸುಧಾರಣಾ ಆಯೋಗದ ಈ ಕೆಳಕಂಡ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಗಿದೆ.

1. ಸಚಿವಾಲಯದಲ್ಲಿ ಪೀಠಾಧಿಕಾರಿ ಪದ್ಧತಿ ಜಾರಿ
2. ಸಚಿವಾಲಯದಲ್ಲಿ ಏಕಕಡತ ಪದ್ಧತಿ ಜಾರಿ
3. ರಾಜ್ಯ ಸರ್ಕಾರಿ ನೌಕರರ ವರ್ಗಾವಣೆ ನೀತಿ.
4. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಭ್ರಷ್ಟಾಚಾರ ನಿರ್ಮೂಲನ ಉನ್ನತ ಮಟ್ಟದ ಸಮಿತಿ ರಚನೆ.
5. ಸಾರ್ವಜನಿಕ ಸನ್ನದುಗಳ ತಯಾರಿಕೆ.
6. ಸಚಿವಾಲಯ ವಾಚನಾಲಯದ ಸುಧಾರಣೆ
7. ತರಬೇತಿ ನೀತಿ
8. ಸಚಿವಾಲಯದಲ್ಲಿ ಲಾನ್ ಪದ್ಧತಿ ಜಾರಿ
9. ಶನಿವಾರಗಳಂದು ಸಭಾ ರಹಿತ ದಿನವೆಂದು
10. ಸರ್ಕಾರದ ಅಧಿಕೃತ ಕೆಲಸಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯುವುದು.
11. ಇ- ಆಡಳಿತ
12. ವಿಚಾರಣಾ ಪ್ರಕರಣಗಳ ವಿಲೇ ಮಾಡಲು ಸಮಯಗೊಳಿಸುವುದು ಮತ್ತು ಶಿಕ್ಷೆ ವಿಧಿಸುವ ವಿಧಾನ ರೂಪಿಸಲಾಗಿದೆ.

ಇದಲ್ಲದ ಸರ್ಕಾರವು ಆಡಳಿತ ಸುಧಾರಣೆ ಕುರಿತಂತೆ 2001-02 ರಿಂದ ವಾರ್ಷಿಕವಾಗಿ ಆಡಳಿತ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆಯನ್ನ ಎಹಮ್ಮಿಕೊಂಡು ಆಡಳಿತ ಸುಧಾರಣೆ ಪ್ರಕ್ರಿಯೆಯನ್ನು ಮುಂದುವರಿಸಲಾಗುತ್ತಿದೆ. 2002-03 ಕರ್ನಾಟಕದಲ್ಲಿ ಆಡಳಿತ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆ ಪ್ರಕಟಿಸಲಾಗಿದೆ. ಇದರಲ್ಲಿ 2001-2002 ರಲ್ಲಿ ಸಾಧಿಸಲಾದ ವಿಷಯಗಳ

ಪಟ್ಟಿ ಹಾಗೂ 2002-03ರಲ್ಲಿ ಮಾಡಬಹುದಾದ ವಿಷಯಗಳ ಯೋಜನೆಯನ್ನು ನಿಗಧಿಪಡಿಸಲಾಗಿದೆ.

ಇ) ಇನ್ನು ಅನುಷ್ಟಾನಗೊಳಿಸಬೇಕಾದ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು ಈ ಕೆಳಕಂಡಂತಿದೆ.

- ಸಚಿವಾಲಯದ ಸುಧಾರಣೆ
- ಜಿಲ್ಲಾ ಆಡಳಿತ ಸುಧಾರಣೆ
- ಒಳ್ಳೆಯ ಆಡಳಿತ ಕುರಿತು ಶಿಫಾರಸ್ಸುಗಳು
- 13 ಇಲಾಖೆಗಳ ಕಾರ್ಯಸಮೀಕ್ಷೆ ನಡೆಸಿ ಮಾಡಿರುವ ಶಿಫಾರಸ್ಸುಗಳು
- ಸರಿಗಾತ್ರದ ಕ್ರಮಗಳು, ಮಿತವ್ಯಯ ಕ್ರಮಗಳು ಹಾಗೂ ಇ-ಆಡಳಿತ ಸೇರಿದಂತೆ ಗೌವರ್ನೆನ್ಸ್ ವಿಷಯಗಳು
- ಯೋಜನೆ ಮತ್ತು ಯೋಜನೇತರ ಜಾರಿಯಲ್ಲಿ ಇರುವ ಯೋಜನೆಗಳ ವಿಲೀನಗೊಳಿಸುವಿಕೆ ರದ್ದುಗೊಳಿಸುವುದು.
- ಈಗ ಸರ್ಕಾರವು ನಿರ್ವಹಿಸುತ್ತಿರುವ ಕೆಲವೊಂದು ಕಾರ್ಯಚಟುವಟಿಕೆಗಳನ್ನು ಬಾಹ್ಯ ಮೂಲದಿಂದ ಪಡೆಯುವ ಬಗ್ಗೆ.

ಈ) ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆಗಳನ್ನು ನಡೆಸಿದ್ದು, ಸಭೆಯ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಇಲಾಖೆಗಳು ಕಾರ್ಯಯೋಜನೆಗಳನ್ನು ರೂಪಿಸುತ್ತಿವೆ.

ಇಲಾಖೆಗಳ ಕಾರ್ಯಯೋಜನೆಯನ್ನು ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಲು ರಚಿಸಿರುವ ಸಚಿವ ಸಂಪುಟ ಉಪ ಸಮಿತಿಯ ಮುಂದೆ ಮಂಡಿಸಲಾಗುತ್ತಿದೆ.

2001-2002 ರ ನವೆಂಬರ್‌ವರೆಗೆ ಬೆಂಗಳೂರು ನಗರದಲ್ಲಿ ನಡೆದಿರುವ ಕೊಲೆ, ದರೋಡೆ, ಸರಗಳ್ಳತನ ಪ್ರಕರಣಗಳು

2133 (2209) - ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001ನೇ ಜನವರಿಯಿಂದ 2002ನೇ ನವೆಂಬರ್‌ವರೆಗೆ ಬೆಂಗಳೂರು ನಗರದಲ್ಲಿ ನಡೆದಿರುವ ಕೊಲೆ, ದರೋಡೆ, ಸರಗಳ್ಳತನ, ಸುಲಿಗೆ, ಡಕಾಯಿತಿ ಪ್ರಕರಣಗಳು ಎಷ್ಟು;

ಆ) ಇವುಗಳ ಪೈಕಿ ಎಷ್ಟು ಪ್ರಕರಮಗಳನ್ನು ಪತ್ತೆ ಹಚ್ಚಲಾಗಿದೆ;

ಇ) ಬೆಂಗಳೂರು ನಗರದಲ್ಲಿ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಪ್ರಕರಣಗಳ ವಿವರ ಈ ಕೆಳಕಂಡಂತಿದೆ.